ದಿನಾಂಕಃ **03.02.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ವಿ ಎಸ್ ವಕೀಲರಿಂದಃ

ದಾವಾ ಸ್ವತ್ತಿನ ಅಕ್ಕ-ಪಕ್ಕದಲ್ಲಿ ನನಗೆ ಆಸ್ತಿ ಇರುವುದಿಲ್ಲ. ದಾವ ಸ್ವತ್ತು ಈರಣ್ಣರವರ ಪಿತ್ರಾರ್ಜಿತ ಸ್ವತ್ತು. ದಾವ ಸ್ವತ್ತು ಈರಣ್ಣರವರ ಪಿತ್ರಾರ್ಜಿತ ಆಸ್ತಿ ಎನ್ನುವುದಕ್ಕೆ ನಾನು ದಾಖಲೆ ನೋಡಿರುವುದಿಲ್ಲ. ವಾದಿಯ ಹೆಸರಿಗೆ ವರ್ಗಾವಣೆಯಾಗಿರುವ ದಾವ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಮನೆ ಕಟ್ಟಲು ವಾದಿಗೆ ಸುಮಾರು 3-4 ವರ್ಷಗಳ ಹಿಂದೆ ಸರ್ಕಾರದಿಂದ ಹಣ ಬಂದಿರುತ್ತದೆ, ಆದರೆ ಮನೆ ಕಟ್ಟಿರುವುದಿಲ್ಲ.

2. ಸರ್ವೆ ನಂ.141 ರಲ್ಲಿನ ಜಮೀನು ನೋಡಿರುತ್ತೇನೆ. ದಾವ ಸ್ವತ್ತು ಸರ್ವೆ ನಂ. 141 ರ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಸರ್ವೆ ನಂ.141 ನ್ನು ಚಿತ್ತಯ್ಯ ಮತ್ತು ಅವರ ಅಣ್ಣ-ತಮ್ಮಂದಿರು ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ. 141 ರಲ್ಲಿ ಪೂರ್ವಕ್ಕೆಃ ತಿಪ್ಪೇಚಿತ್ತಯ್ಯ ರವರ ಜಮೀನು, ಪಶ್ಚಿಮಕ್ಕೆಃ ಬಾಲಯ್ಯುವರ ಜಮೀನು, ಉತ್ತರ ಮತ್ತು ದಕ್ಷಿಣಕ್ಕೆ ಗ್ರಾಮಠಾಣ ಸ್ವತ್ತು ಈ ಮಧ್ಯೆ ಇರುವ ಜಮೀನಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವ ಸ್ವತ್ತು ಗ್ರಾಮಠಾಣ ವ್ಯಾಪ್ತಿಯಲ್ಲಿರುತ್ತದೆ. ಗ್ರಾಮ ಪಂಚಾಯ್ತಿಯಿಂದ ದಾವ ಸ್ವತ್ತು ವಾದಿಗೆ ಮಂಜೂರಾಗಿರುತ್ತದೆ.

3. ದಾವ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಹೇಳಿಕೆಯ ಮೇರೆಗೆ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Sd/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ .